# ಕರ್ನಾಟಕ ವಿಧಾನಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1268(1331)

ಮಾನ್ಯ ಸದಸ್ಯರ ಹೆಸರು: ಡಾ: ತಳವಾರ್ ಸಾಬಣ್ಣ
(ವಿಧಾನ ಪರಿಷತ್ತಿನ ನಾಮನಿರ್ದೇಶಿತ ಸದಸ್ಯರು)

ಉತ್ತರಿಸುವ ಸಚಿವರು: ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

ಉತ್ತರಿಸಬೇಕಾದ ದಿನಾಂಕ: 16-03-2026

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | 1999 ರಲ್ಲಿ ಗ್ರೂಪ್ 'ಬಿ' ವೃಂದದ ಪ್ರೌಢಶಾಲಾ ಮುಖ್ಯ ಶಿಕ್ಷಕರಾಗಿ ನೇರವಾಗಿ ನೇಮಕಗೊಂಡ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕೆಲ ಅಧಿಕಾರಿಗಳಿಗೆ ಸ್ಥಾನ ಪದೋನ್ನತಿ ನೀಡದಿರಲು ಕಾರಣಗಳೇನು? | 1999 ರಲ್ಲಿ ಗ್ರೂಪ್ 'ಬಿ' ವೃಂದದ ಪ್ರೌಢಶಾಲಾ ಮುಖ್ಯ ಶಿಕ್ಷಕರಾಗಿ ನೇರವಾಗಿ ನೇಮಕಗೊಂಡ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಧಿಕಾರಿಗಳಿಗೆ ಸ್ಥಾನ ಪದೋನ್ನತಿಯನ್ನು ನಿಯಮಾನುಸಾರ ಹಾಗೂ ಮಾರ್ಗಸೂಚಿಗಳನ್ವಯ ಕಾಲಕಾಲಕ್ಕೆ ನೀಡಲಾಗಿರುತ್ತದೆ. |
| (ಆ) | ದಿನಾಂಕ:11.12.2007 ರಿಂದ ಗ್ರೂಪ್ 'ಬಿ' ವೃಂದದಿಂದ ಗ್ರೂಪ್ 'ಎ' ವೃಂದಕ್ಕೆ ಪದೋನ್ನತಿ ನೀಡುವಾಗ ಸಾಮಾನ್ಯ ವರ್ಗದವರಿಗೆ ಪರಿಗಣಿಸಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಧಿಕಾರಿಗಳನ್ನು ಪರಿಗಣಿಸದಿರುವುದರಿಂದ ಅವರನ್ನು ಅವಕಾಶ ವಂಚಿತರನ್ನಾಗಿ ಸಲಾಗಿದೆಯೇ | ಕಾಲಕಾಲಕ್ಕೆ ನಡೆಸಲಾಗಿರುವ ಇಲಾಖಾ ಮುಂಬಡ್ತಿ ಸಮಿತಿ ಸಭೆಗಳಲ್ಲಿ ಸಾಮಾನ್ಯ ವರ್ಗದವರನ್ನು ಪರಿಗಣಿಸಿದಂತೆ ನಿಯಮಾನುಸಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಧಿಕಾರಿಗಳನ್ನು ಪರಿಗಣಿಸಿ ಕಾಲಕಾಲಕ್ಕೆ ಬಡ್ತಿಯನ್ನು ನೀಡಲಾಗಿದ್ದು, ಬಡ್ತಿಯಿಂದ ಅವಕಾಶ ವಂಚಿತರಾಗಿರುವುದಿಲ್ಲ. |
| (ಇ) | ಗ್ರೂಪ್ 'ಬಿ' ದಿಂದ ಗ್ರೂಪ್ 'ಎ' ವೃಂದಕ್ಕೆ ಪದೋನ್ನತಿ ನೀಡುವಾಗ ಕೇವಲ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮುಖ್ಯ ಶಿಕ್ಷಕರನ್ನು/ಅಧಿಕಾರಿಗಳನ್ನು ಕಡೆಗಣಿಸಿರುವುದು ಭಾರತದ ಸಂವಿಧಾನ ಅನುಚ್ಛೇದ 14(4ಎ)ರ ವಿರುದ್ಧವಾಗಿದ್ದು, ಅವರನ್ನು ತಕ್ಷಣವೇ ಪದೋನ್ನತಿ ಕೊಟ್ಟು ಸಾಮಾಜಿಕ ನ್ಯಾಯ ಒದಗಿಸಬಹುದೆ | ಗ್ರೂಪ್ 'ಬಿ' ದಿಂದ ಗ್ರೂಪ್ 'ಎ' ವೃಂದಕ್ಕೆ ಪದೋನ್ನತಿ ನೀಡುವಾಗ ಅರ್ಹರಿರುವ ಎಲ್ಲಾ ವರ್ಗದವರನ್ನು ಪರಿಗಣಿಸಿ ಪದೋನ್ನತಿ ನೀಡಿದ್ದು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮುಖ್ಯ ಶಿಕ್ಷಕರಿಗೆ ಕೂಡಾ ಪದೋನ್ನತಿ ನೀಡಲಾಗಿದೆ. ಯಾರನ್ನು ಕಡೆಗಣಿಸಿರುವುದಿಲ್ಲ. |
| (ಈ) | 1999 ರಿಂದ ಇಲ್ಲಿಯವರೆಗೆ ನಿಷ್ಠೆಯಿಂದ ಸರ್ಕಾರ ಸೇವೆ ಸಲ್ಲಿಸಿರುವ ಅಧಿಕಾರಿಗಳಿಗೆ ಜೇಷ್ಠತೆಯನ್ನು ನಿಗದಿಮಾಡಿ ತಕ್ಷಣವೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಧಿಕಾರಿಗಳಿಗೆ ಪದೋನ್ನತಿ ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೇ? | ಅಧಿಕಾರಿಗಳ ಜೇಷ್ಠತೆಯನ್ನು ನಿಗದಿಮಾಡಿದ್ದು, ಕಾಲಕಾಲಕ್ಕೆ ಬಡ್ತಿ ಕೋಟಾದಲ್ಲಿ ಖಾಲಿಯಾಗುವ ಹುದ್ದೆಗಳಿಗೆ ರೋಸ್ಟರ್/ನಿಯಮಾನುಸಾರ ಬಡ್ತಿ ನೀಡಲಾಗಿರುತ್ತದೆ. |

ಸಂಖ್ಯೆ: ಇಪಿ 21 ಪಿಡಿಬಿ 2026

(ಎಸ್. ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು